+ಶ್ರೀ ಎಂ. ಮಹದೇವ್ (ರೇಷ್ಮೆ, ಜವಳಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರೇಷ್ಮೆ ನೂಲು ಬಿಚ್ಚಣಿಕೆದಾರರು ಸಹಕಾರ ಮತ್ತು ವಾಣಿಜ್ಯ ಬ್ಯಾಂಕುಗಳು ಹಾಗೂ ಕರ್ನಾಟಕ ರಾಜ್ಯ ಹಣಕಾಸು ನಿಗಮಗಳಿಂದ ಪಡೆದಿರುವ ಸರಳ ಬಡ್ಡಿ ಸಾಲ ಶೇಕಡ ನೂರಕ್ಕೆ ನೂರರಷ್ಟು ದಿನಾಂಕ: 31-3-2000ದ ಒಳಗೆ ಹಣವನ್ನು ವಾಪಸ್ಸು ನೀಡಿದರೆ ಆ ಪ್ರಕರಣಗಳಿಗೆ ಅನ್ವಯಿಸುವಂತೆ ಸರ್ಕಾರ ಆದೇಶದ ಸಂಖ್ಯೆ: ಸಿ12 ಎಸ್‌ಐಎಲ್‌ಕೆ ಪ್ರಕಾರ ಬೆಲೆ ಸ್ಥಿರೀಕರಣನಿಧಿ ಪ್ರಾಧಿಕಾರದಿಂದ ಹಿಂಬರಿಸಲು ಅನುಮತಿಯನ್ನು ಪಡೆಯಲಾಗಿತ್ತು. ತಾವು ಹೇಳಿದಹಾಗೆ ಈ ಆದೇಶದಲ್ಲಿ ಈ ಸೌಲಭ್ಯವನ್ನು ದಿನಾಂಕ: 31-10-2000ದವರೆಗೆ ವಿಸ್ತರಿಸಲಾಗಿತ್ತು. ಈ ಆದೇಶ ಸಂಬಂಧಪಟ್ಟ ಬ್ಯಾಂಕುಗಳು ಇತರೆ ಸಂಸ್ಥೆಗಳಿಗೆ ತಲುಪದಿರುವ ಕಾರಣ ಆದೇಶವನ್ನು ದಿನಾಂಕ: 31-3-2001ರವರೆಗೆ ವಿಸ್ತರಿಸಬೇಕೆಂದು ನೂಲು ಬಿಚ್ಚಣಿಕೆದಾರರ ಸಂಘಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಮನವಿಯನ್ನು ಪರಿಶೀಲಿಸಿ ಸದರಿ ಯೋಜನೆಯ ಅವಧಿಯನ್ನು ದಿನಾಂಕ: 31-3-2001 ರವರೆಗೆ ಅಂತಿಮವಾಗಿ ವಿಸ್ತರಿಸಲು ಸಚಿವಸಂಪುಟದ ಅನುಮೋದನೆಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಬಡ್ಡಿ ಮೊತ್ತ ಒಟ್ಟು ಏಳೂವರೆ ಕೋಟಿ ರೂಪಾಯಿಯಾಗುತ್ತದೆ.

12.40 ಪಿ.ಎಂ.

ಸುಸ್ತಿ ಬಡ್ಡಿ ಮೊತ್ತ 50 ಲಕ್ಷ ರೂಪಾಯಿಗಳು ಆಗುತ್ತದೆ. ಅಸಲು 12 ಕೋಟಿ ರೂಪಾಯಿಗಳು ಇದೆ. ಏಳೂವರೆ ಕೋಟಿ ರೂಪಾಯಿಗಳು ಬಡ್ಡಿ ಮತ್ತು ಸುಸ್ತಿಬಡ್ಡಿ ಇದೆ. ಇದನ್ನು ಸರ್ಕಾರ ಪರಿಶೀಲನೆ ಮಾಡಿ ಮುಂದಿನ ಸಚಿವ ಸಂಪುಟಸಭೆ ಮುಂದೆ ತಂದು ಇದನ್ನು ವಿಸ್ತರಿಸಲಿಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

(ಅ) ಕೆ.ಜಿ.ಎಫ್. ಕ್ಷೇತ್ರದಲ್ಲಿನ ರಾಬರ್ಟ್‌ಸನ್‌ಪೇಟೆ ಮುನಿಸಿಪಾಲಿಟಿ ಕುರಿತು.

ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್) :— ಮಾನ್ಯ ಅಧ್ಯಕ್ಷರೇ, ನಮ್ಮ ಕೋಲಾರ ಜಿಲ್ಲೆಯಲ್ಲಿ ಹನ್ನೊಂದು ಎಂ.ಎಲ್.ಎ. ಕ್ಷೇತ್ರಗಳು ಇವೆ. ಅದರಲ್ಲಿ ನನ್ನ ಕೆ.ಜಿ.ಎಫ್. ಕ್ಷೇತ್ರದಲ್ಲಿ ರಾಬರ್ಟ್‌ಸನ್‌ಪೇಟೆ ಮುನಿಸಿಪಾಲಿಟಿಯಲ್ಲಿ ಇವತ್ತಿನ ದಿವಸ ಬಹಳ ಅನ್ಯಾಯ, ಅಕ್ರಮ ಎಲ್ಲ ಆಗಿದೆ. ಮಿಸ್-ಮ್ಯಾನೇಜ್‌ಮೆಂಟ್, ಮಿಸ್‌ಯೂಸ್ ಆಫ್ ಫಂಡ್ ಏನಾಗಿದೆ, ಅದರ ಬಗ್ಗೆ ಇವತ್ತಿನದಿವಸ ನಾನು ಇಲ್ಲಿ ಸಭೆಯಲ್ಲಿ ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲಿ ಪೂರ್ತಿಯಾಗಿ ಅರ್ಬನ್ ಏರಿಯಾ ಬರುತ್ತದೆ. ನಾವು ಶಾಸಕರಾಗಿ ಜನರಿಗೆ ಕೆಲಸ ಮಾಡಬೇಕು ಎಂದರೆ ಈಗ ಕೆ.ಜಿ.ಎಫ್. ಮುನಿಸಿಪಾಲಿಟಿಯಿಂದ ನಾವು ಮಾಡಬೇಕು. ಒಂದು ಸಣ್ಣ ಕೆಲಸವನ್ನು, ಒಂದು ಸಿಂಗಲ್ ಸ್ವೀಟ್ ಲೈಟ್ ಹಾಕಬೇಕಾದರೂ ಮುನಿಸಿಪಾಲಿಟಿಯನ್ನು ಕೇಳಬೇಕು, ಮತ್ತು

ಅವರ ಮೂಲಕ ಜನರಿಗೆ ಕೆಲಸ ಮಾಡಿಸಿಕೊಡಬೇಕು. ಈ ಸಂದರ್ಭದಲ್ಲಿ ಕಳೆದ ಆರು ತಿಂಗಳಿಂದ ಆಲ್ಲಿ ಅಧ್ಯಕ್ಷ ಸ್ಥಾನದಲ್ಲಿರುವವರು ಮಿಸ್‌ಯೂಸ್ ಆಫ್ ಪವರ್ ಉಪಯೋಗ ಮಾಡಿಕೊಂಡಿದ್ದಾರೆ. ನಾವು ಇದರ ಬಗ್ಗೆ ಮಾನ್ಯ ಸಚಿವರಿಗೆ ಒಂದು ಅರ್ಜಿಯನ್ನು ಕಳಿಸಿದ್ದೇವೆ. ಅದರಲ್ಲಿ ಒಟ್ಟು 15 ಚಾರ್ಜಸ್‌ನ್ನು ಮಾಡಿ ಕೊಟ್ಟಿದ್ದೇವೆ.

SRI CHANDREGOWDA (Law Minister) :— Making allegations against chosen representatives of Municipality, how can it come under the purview of Zero hour? ಮಿಸ್‌ಯೂಸ್ ಆಫ್ ಪವರ್‌ನ್ನು ಶೂನ್ಯವೇಳೆಯಲ್ಲಿ ಹೇಗೆ ಚರ್ಚೆ ಮಾಡುವುದಕ್ಕೆ ಆಗುತ್ತದೆ?

ಅಧ್ಯಕ್ಷರು :— ನೀವು ಇಂಥಾದ್ದನ್ನೆಲ್ಲ ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಅವರ ಕಚೇರಿಯಲ್ಲಿ ಮಾತನಾಡಬೇಕು.

SRI CHANDREGOWDA (Law Minister) :— He should give atleast notice,

ಅಧ್ಯಕ್ಷರು :— ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವರು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ matters of utmost importance which the House should take notice of ಅಂಥಾದ್ದು ಬರಬೇಕು. ಯಾವುದೋ ಮಿಸ್‌ಯೂಸ್ ಆಗಿರುವ ಪ್ರಕರಣವನ್ನು ತಂದರೆ ಹೇಗೆ?

ಅಧ್ಯಕ್ಷರು :— ಮಾನ್ಯ ಸದಸ್ಯರ ಮನಸ್ಸಿನಲ್ಲಿ ಅದು ಮುಖ್ಯವಾದುದು ಎಂದು ತೆಗೆದುಕೊಂಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಅದು ಮುಖ್ಯವಾದ ವಿಷಯ ಇರಬಹುದು. ವಿಷಯದ ಬಗ್ಗೆ ನಾನು ಏನೂ ಹೇಳುವುದಿಲ್ಲ.

ಅಧ್ಯಕ್ಷರು :— ಭಕ್ತವತ್ಸಲಂ ಅವರೇ, ಇನ್ನು ಮುಂದೆ ನೀವು ಇಂಥ ವಿಷಯಗಳನ್ನು ಮಂತ್ರಿಗಳ ಹತ್ತಿರ ಹೋಗಿ ಸರಿಪಡಿಸಿಕೊಳ್ಳಿ. ಅದನ್ನು ಇಲ್ಲಿ ಏಕೆ ತರಬೇಕು? ಬೇಗ ಮುಗಿಸಿ.

ಶ್ರೀ ಎಂ. ಭಕ್ತವತ್ಸಲಂ :— ಇವತ್ತಿನ ದಿವಸ ಕೆ.ಜಿ.ಎಫ್‌ನಲ್ಲಿ ಪರಿಶಿಷ್ಟ ಜಾತಿಯವರು ಜಾಸ್ತಿ ಇದ್ದಾರೆ. ಗಾಂಧೀನಗರ ಎನ್ನುವ ಏರಿಯಾದಲ್ಲಿ ಪಬ್ಲಿಕ್ ರೀಡಿಂಗ್ ರೂಮ್‌ನ್ನು ಕಟ್ಟಿದ್ದಾರೆ. ಅದನ್ನು ಯಾರೋ ಒಬ್ಬರಿಗೆ ಕೌನ್ಸಿಲರ್‌ನ ಆಪ್ರೂವಲ್ ಮಾಡಿ ಕೊಟ್ಟಿದ್ದಾರೆ.

ಅಧ್ಯಕ್ಷರು :— ಅದನ್ನೆಲ್ಲ ಮಂತ್ರಿಗಳ ಕಚೇರಿಗೆ ಹೋಗಿ ಹೇಳಿದರೆ ಅವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಭಕ್ತವತ್ಸಲಂ :— ಈಗ ಕೆ.ಜಿ.ಎಫ್.ನಲ್ಲಿ ಎಲ್ಲಿ ನೋಡಿದರೆ ಅಲ್ಲಿ ಇಲ್ಲಿಗಲ್ ಕನಸ್ಟ್ರಕ್ಷನ್ಸ್ ಮಾಡಿದ್ದಾರೆ. ಅಂಗಡಿಗಳನ್ನು ಕಟ್ಟಿಕೊಂಡಿದ್ದಾರೆ, ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದನ್ನು ನಾನು ಒಬ್ಬ ಶಾಸಕನಾಗಿ ನೋಡಿಕೊಂಡು ಸುಮ್ಮನೆ ಇರಬೇಕಾ? ಸಾರ್ವಜನಿಕರು ಬಂದು ನನ್ನನ್ನು ಕೇಳುತ್ತಾರೆ. ಮುನಿಸಿಪಾಲಿಟಿ ಪ್ರೆಸಿಡೆಂಟ್ ಜತೆಯಲ್ಲಿ ಎಂ.ಎಲ್.ಎ. ಸೇರಿಬಿಟ್ಟು ಲಂಚ ತೆಗೆದುಕೊಂಡು ಹೀಗೆಲ್ಲ ಮಾಡುತ್ತಾರೆ ಎಂದು ನನ್ನನ್ನೇ ಕೇಳುತ್ತಾರೆ. ಸ್ಥಳೀಯ ಜನರು ಹಾಗೆ ಹೇಳುತ್ತಾರೆ. ಇದಕ್ಕೆ ನಾವು ಏನು ಮಾಡಬೇಕು? ಇಂಥಾದ್ದನ್ನು ಇಲ್ಲಿ ಶೂನ್ಯವೇಳೆಯಲ್ಲೇ ಕೇಳಬೇಕಾಗುತ್ತದೆ.

ಅಧ್ಯಕ್ಷರು :— ಆಯಿತು. ಮಂತ್ರಿಗಳು ಏನು ಉತ್ತರ ಹೇಳುತ್ತಾರೆಂದು ನೋಡೋಣ.

ಶ್ರೀ ಎಂ. ಭಕ್ತವತ್ಸಲಂ :— ಅಧ್ಯಕ್ಷರೇ, ಇಲ್ಲಿ ಪ್ರೆಸಿಡೆಂಟ್ ಅವರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ನಾನು ಹೇಳಿದ್ದೇನೆ. ಇವತ್ತಿನದಿವಸ ಹದಿನೈದು ಅಂಗಿಡಗಳನ್ನು ಕಟ್ಟಿಕೊಂಡಿದ್ದಾರೆ. ಇವೆಲ್ಲವೂ ಅನಧಿಕೃತ ಕಟ್ಟಡಗಳಾಗಿವೆ. ಅಲ್ಲಿ ಕೌನ್ಸಿಲರ್ಸ್ ಕೇಳಿದರೆ ಅವರಿಗೆ ಕೆಟ್ಟ ಮಾತುಗಳನ್ನು ಹೇಳಿ ಅವರು ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ಹೆಲ್ತ್ ಇನ್‌ಸ್ಪೆಕ್ಟರ್‌ಗೆ ಕೆಲಸ ಮಾಡುವುದಕ್ಕೆ ಅವರು ಬಿಡುವುದಿಲ್ಲ. ನಾನು ಶಾಸಕನಾಗಿ ಇಲ್ಲಿ ಅನ್ಯಾಯವಾಗಿದೆ ಎಂದು ಆ ಅಧಿಕಾರಿಗಳನ್ನು ಕೇಳಿದರೆ, ಅಧ್ಯಕ್ಷರು ಓರಲ್ ಆರ್ಡರ್ ಮಾಡಿದ್ದಾರೆ, ನಮಗೆ ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಕೌನ್ಸಿಲರ್‌ಗಳು ಹೇಳುತ್ತಾರೆ. ನಾನು ಶಾಸಕನಾಗಿರುವುದರಿಂದ ಸಾರ್ವಜನಿಕರು ಬಂದು ನನ್ನನ್ನೇ ಕೇಳುತ್ತಾರೆ, ಏನ್ರಿ ಹೀಗೆಲ್ಲ ಅನ್ಯಾಯವಾಗಿದೆ, ನೀವು ಮುನಿಸಿಪಾಲಿಟಿ ಅಧ್ಯಕ್ಷರ ಜೊತೆಯಲ್ಲಿ ಸೇರಿ ಲಂಚ ತೆಗೆದುಕೊಂಡು ಇದಕ್ಕೆಲ್ಲ ಪ್ರೋತ್ಸಾಹ ಕೊಡುತ್ತಿದ್ದೀರಿ ಎಂದು ಹೇಳುತ್ತಾರೆ. ಇದಕ್ಕೆ ನಾನು ಏನು ಉತ್ತರ ಹೇಳಬೇಕು? ಜನರು ನನ್ನನ್ನು ಇಲ್ಲಿಂದ ಆಯ್ಕೆಮಾಡಿ ಶಾಸನಸಭೆಗೆ ಕಳಿಸಿದ್ದಾರೆ.

ಅಧ್ಯಕ್ಷರು :— ಆಯಿತು. ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಮಂತ್ರಿ) :— ಸನ್ಮಾನ್ಯ ಅಧ್ಯಕ್ಷರೇ, ಕೆ.ಜಿ.ಎಫ್.ನ ರಾಬರ್ಟ್‌ಸನ್ ಪೇಟೆ ಮುನಿಸಿಪಾಲಿಟಿ ಅಧ್ಯಕ್ಷರ ಮೇಲೆ ನಮ್ಮ ಭಕ್ತವತ್ಸಲಂ ಅವರು ಶೂನ್ಯ ವೇಳೆಯಲ್ಲಿ ಸುಮಾರು 8 ಆಪಾದನೆಗಳನ್ನು ಮಾಡಿ ಒಂದು ಪತ್ರವನ್ನು ನನಗೆ ಕೊಟ್ಟಿದ್ದರು.

ಶ್ರೀ ಎಂ. ಭಕ್ತವತ್ಸಲಂ :— ಅದು 15 ಚಾರ್ಜಸ್ ಇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ನನ್ನ ಮುಂದಿರುವುದು ಎಂಟು. ಅದು ಮತ್ತೆ ಎಂಟು ಹೆಚ್ಚಾಗಿರಬಹುದು? ಪರವಾಗಿಲ್ಲ, 15 ಚಾರ್ಜಸ್ ಕೊಟ್ಟರೂ ಕೂಡ ಅದು ಕೆಲವು ಲ್ಯಾಪ್ಸಸ್ ಆಗಿದೆಯೆಂದು ಅವರು ಹೇಳಿದ್ದಾರೆ. ಯಾವ ರೀತಿ ಲ್ಯಾಪ್ಸಸ್ ಆಗಿದೆ ಮತ್ತು ಯಾವ ರೀತಿಯಾಗಿ ಮಿಸ್‌ಯೂಸ್ ಆಗಿದೆ ಎನ್ನುವ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು, ಅವರು ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಆಗಿರುವುದರಿಂದ ಅವರು ಮಾಡಿರತಕ್ಕಂಥ ಕೆಲಸಕಾರ್ಯಗಳಲ್ಲಿ ಏನಾದರೂ ನ್ಯೂನತೆ ಕಂಡುಬಂದಲ್ಲಿ ಕಾನೂನಿನ ಪ್ರಕಾರ ಕ್ರಮ ಕೈಗೊಂಡು ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡುತ್ತೇನೆ.

ಅಧ್ಯಕ್ಷರು :— ಆಯಿತು ಬಿಡಿ.

ಶ್ರೀ ಎಂ. ಭಕ್ತವತ್ಸಲಂ :— ಇನ್ನು ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ನಿನ್ನೆ 500 ಸೋಡಿಯಂ ಲೈಟ್ಸ್‌ನ್ನು ತೆಗೆದುಕೊಂಡಿದ್ದಾರೆ, ಒಂದು ಲೈಟಿಗೆ ಐದು ಸಾವಿರ ಎಂದು ಬಿಲ್ ತೋರಿಸಿದ್ದಾರೆ. ಲೋಕಲ್‌ನಲ್ಲಿ ಒಂದು ಲೈಟಿಗೆ 290 ರೂಪಾಯಿಗೆ ಕೋಟೇಶನ್ ಇದೆ. ಬೆಂಗಳೂರಿನಲ್ಲಿ 3,700 ರೂಪಾಯಿಗೆ ಕೋಟೇಷನ್ ಕೊಟ್ಟಿದ್ದಾರೆ. ಇನ್ನೊಂದು ಕೋಟೇಶನ್ 3,900 ರೂಪಾಯಿಗೆ ಕೊಟ್ಟಿದ್ದಾರೆ..

ಅಧ್ಯಕ್ಷರು :— ಪ್ರತಿಯೊಂದನ್ನೂ ತರಿಸಿಕೊಂಡು ಅದೆಲ್ಲ ಎನ್‌ಕ್ವೈರಿ ಮಾಡುತ್ತೇನೆ ಎಂದು ಸಚಿವರು ಹೇಳಿದ್ದಾರೆ.

ಶ್ರೀ ಎಂ. ಭಕ್ತವತ್ಸಲಂ :— ಟೆಂಡರ್ ಕರೆಯುವುದಿಲ್ಲ, ರೆಸ್ಯುಲೇಶನ್ ಮಾಡುವುದಿಲ್ಲ. ಅವರ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಆ ಪುರಾವೆಗಳನ್ನು ದಯವಿಟ್ಟು ಕೊಡಿ. ನಾನು ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು :— ಆಯಿತು, ಸಾಕುಬಿಡಿ.

ಶ್ರೀ ಎಂ. ಭಕ್ತವತ್ಸಲಂ :— ಇನ್ನು ಒಂದೇ ಒಂದು. ಈಗ ನಾವು ಕೊಟ್ಟಿರುವ ಸುಮಾರು 40 ಲಕ್ಷ ರೂಪಾಯಿ ಫಂಡ್ ದುರುಪಯೋಗವಾಗಿದೆ. ಇದೆಲ್ಲ ಒಂದು ವಾರದಲ್ಲಿ ಮಾಡಿದ್ದಾರೆ. ಎಲ್ಲಿ ನೋಡಿದರೂ ಫೌಂಡೇಶನ್ ಮಾಡಿದ್ದಾರೆ, ಅಂಗಡಿಗಳನ್ನು ಕಟ್ಟಿಕೊಂಡಿದ್ದಾರೆ.

ಅಧ್ಯಕ್ಷರು :— ಅವರು ಎಲ್ಲ ಮಾಡುತ್ತಾರೆ ಬಿಡಿ. ಪೂರ್ಣವಾಗಿ ತನಿಖೆ ಮಾಡುತ್ತೇವೆ ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಭಕ್ತವತ್ಸಲಂ :— ಇನ್ನೊಂದು, ಕೆ.ಜಿ.ಎಫ್.ನಲ್ಲಿ ಮುನಿಸಿಪಾಲಿಟಿಗಳದ್ದು 1300 ಅಂಗಡಿಗಳು ಇವೆ. ಅದರಲ್ಲಿ ಸರ್ಕಾರ ಏನೂ ಆರ್ಡರ್ ಮಾಡಿಲ್ಲ. ಅವರು ಮೊನ್ನೆ ಒಂದು ನೋಟೀಸ್ ಕೊಟ್ಟು ಎಲ್ಲರಿಗೂ ಸೀಲ್ ಮಾಡುವುದಕ್ಕೆ ಮೀಟಿಂಗ್ ಮಾಡುತ್ತಾರೆ. ಶಾಸಕನಾಗಿ ನನಗೆ ಗೊತ್ತಿಲ್ಲ. ಅಲ್ಲಿರುವ ಮುನಿಸಿಪಲ್ ಕೌನ್ಸಿಲರ್ಸ್‌ಗೆ ಗೊತ್ತಿಲ್ಲ. 1,300 ಅಂಗಡಿಗಳನ್ನು ಮಾರಾಟ ಮಾಡುವುದಕ್ಕೆ ಅವರು ತೀರ್ಮಾನ ಮಾಡಿಬಿಟ್ಟಿದ್ದಾರೆ. ಇದು ಅನ್ಯಾಯ.

ಅಧ್ಯಕ್ಷರು :— ಒಂದು ಸಲ ಮಂತ್ರಿಗಳು ಸಮಗ್ರವಾಗಿ ತನಿಖೆ ಮಾಡುತ್ತೇವೆ ಎಂದು ಹೇಳಿದ ಮೇಲೆ ಇನ್ನೇನು?

ಶ್ರೀ ಎಂ. ಭಕ್ತವತ್ಸಲಂ :— ಅಧ್ಯಕ್ಷರೇ, ಡಾ: ರಾಜಕುಮಾರ್ ಅವರ ರಿಲೀಸ್ ಆಗಿದೆ. ಇದು ನಮ್ಮ ಸರ್ಕಾರಕ್ಕೆ ದೊಡ್ಡ ಸಾಧನೆಯಾಗಿ, ಒಳ್ಳೆಯ ಹೆಸರು ಬಂದಿದೆ. ಇಂತಹ ಸಂದರ್ಭದಲ್ಲಿ, ಕೆ.ಜಿ.ಎಫ್.ನಲ್ಲಿ ನಮ್ಮ ಸರ್ಕಾರದ ಕೆಳಗಡೆ ಇರುವ ಮುನಿಸಿಪಾಲಿಟಿಯಲ್ಲಿ ಅಧ್ಯಕ್ಷರು ಅಧಿಕಾರ ದುರುಪಯೋಗ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಅಲ್ಲಿಯ ಶಾಸಕನಾಗಿರುವ ನನಗೂ ಕೆಟ್ಟ ಹೆಸರು ಬರುತ್ತದೆ. ಇನ್ನು ಒಂದೇ ಒಂದು ಹೇಳುತ್ತೇನೆ....

ಅಧ್ಯಕ್ಷರು :— ಒಂದೇ ಒಂದು ಎಂದು ಹೇಳುತ್ತೀರಿ, ಇದು ಐದನೆಯದನ್ನು ಹೇಳುತ್ತಿದ್ದೀರಿ.

ಶ್ರೀ ಎಂ. ಭಕ್ತವತ್ಸಲಂ :— ಕೆ.ಜಿ.ಎಫ್. ಮುನಿಸಿಪಾಲಿಟಿಯಲ್ಲಿ ಪ್ರೆಸಿಡೆಂಟ್ ಅವರ ಕೊಠಡಿಯಲ್ಲಿ ಡಾ: ಅಂಬೇಡ್ಕರ್ ಅವರ ಫೋಟೊವನ್ನು ಬಹಳ ದೊಡ್ಡದಾಗಿ ಕಳೆದ ಹತ್ತು ವರ್ಷಗಳಿಂದ ಇಟ್ಟಿದ್ದಾರೆ.

ಅಧ್ಯಕ್ಷರು :— ಅವರು ಎಲ್ಲವನ್ನೂ ಸಮಗ್ರವಾಗಿ ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದ ಮೇಲೂ ಕೂಡ ನೀವು ಮಾತನಾಡುತ್ತಿದ್ದೀರಿ.

ಶ್ರೀ ಎಂ. ಭಕ್ತವತ್ಸಲಂ :— ನನಗೆ ಬೇರೆ ಟೈಮ್‌ನ್ನು ಫಿಕ್ಸ್ ಮಾಡಿಕೊಡಿ ಅಧ್ಯಕ್ಷರೇ.

ಅಧ್ಯಕ್ಷರು :— ಆಯಿತು, ಫಿಕ್ಸ್ ಮಾಡಿಕೊಡೋಣ.

ಶ್ರೀ ಎಂ. ಭಕ್ತವತ್ಸಲಂ :— ಅಲ್ಲಿ ಅಧ್ಯಕ್ಷರ ರೂಮಿನಲ್ಲಿ ಡಾ: ಅಂಬೇಡ್ಕರ್ ಅವರ ಫೋಟೊ ದೊಡ್ಡದಾಗಿ ಕಳೆದ ಹತ್ತು ವರ್ಷಗಳ ಕಾಲದಿಂದ ಇದೆ, ಇವರು ಅಧ್ಯಕ್ಷರಾಗಿ

ಬಂದಮೇಲೆ ಡಾ: ಅಂಬೇಡ್ಕರ್ ಅವರ ಫೋಟೊವನ್ನು ತೆಗೆದುಹಾಕಿ ಇವರ ತಂದೆಯ ಫೋಟೊ ಹಾಕಿಕೊಂಡಿದ್ದಾರೆ. ನಾನು ಈ ಸಾಲಿನಲ್ಲಿ ಶಾಸಕನಾಗಿ ಬರುವುದಕ್ಕೆ ಕಾರಣ ಡಾ: ಅಂಬೇಡ್ಕರ್ ಅವರು. ಅವರು ನನ್ನ ದೇವರು. ಅವರ ಫೋಟೊವನ್ನು ತೆಗೆದುಬಿಟ್ಟು ಅವರ ತಂದೆಯ ಫೋಟೊ ಹಾಕಿಕೊಂಡಿದ್ದಾರೆ. ಇಷ್ಟೆಲ್ಲಾ ಅನ್ಯಾಯ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಅವರ ಮೇಲೆ ಕ್ರಮ ತೆಗೆದುಕೊಂಡು ಸೂಕ್ತವಾದ ರೀತಿಯಲ್ಲಿ ತೀರ್ಮಾನ ಮಾಡಬೇಕಾಗುತ್ತದೆ.

ಅಧ್ಯಕ್ಷರು :— ಮಾನ್ಯ ಸಚಿವರು ಸಂಬಂಧಪಟ್ಟವರಿಗೆ ನೋಟೀಸ್ ಕೊಟ್ಟು ಸಂಬಂಧಪಟ್ಟ ಅಧಿಕಾರಿಯನ್ನು ಕರೆಸಿ ಮಾತನಾಡಿ.

ಶ್ರೀ ಎಂ. ಭಕ್ತವತ್ಸಲಂ :— ಇಷ್ಟೇ ಅಲ್ಲ, ಶ್ರೀಮತಿ ಇಂದಿರಾಗಾಂಧಿಯವರ ಫೋಟೊವನ್ನ ತೆಗೆಯುತ್ತಾರೆ, ರಾಜೀವ್ ಗಾಂಧಿಯವರ ಫೋಟೊವನ್ನು ತೆಗೆಯುತ್ತಾರೆ. ಆದರೆ ಅವರ ತಂದೆಯವರ ಫೋಟೊವನ್ನು ಅಲ್ಲಿಯ ಅಧ್ಯಕ್ಷರು ಇಟ್ಟುಕೊಂಡಿದ್ದಾರೆ.

ಅಧ್ಯಕ್ಷರು :— ಮಾನ್ಯ ಸಚಿವರು ಸಂಬಂಧಪಟ್ಟ ಆ ಅಧಿಕಾರಿಯನ್ನು ಕರೆಸಿ ಮಾತನಾಡಿ.

ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶಾಸಕರಿಗೆ ಹೇಳುತ್ತಿದ್ದೇನೆ. ಇಂದೇ ಬೇಕಾದರೆ ಅವರನ್ನು ಕರೆಸಿ ಮಾತನಾಡಿ ಈ ರೀತಿ ಏನಾದರೂ ಹಾನೂನು ನ್ಯೂನತೆಯ ಕೆಲಸ ಆಗಿದ್ದರೆ ಅವರ ಮೇಲೆ ನಾನು ಜರೂರಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :— ಈಗ ಸಂಗಣ್ಣ ಬೆಳ್ಳುಬ್ಬಿಯವರದ್ದು. ತಾವು ಮೆಕ್ಕೆಜೋಳದ ಬಗ್ಗೆ ಕೇಳಿದ್ದೀರಿ. ಮಾನ್ಯ ಬೆಳ್ಳುಬ್ಬಿಯವರು ಬೆಲೆ ಕುಸಿತದ ವಿಚಾರದ ಮೇಲೆ ಮಾತನಾಡಿ, ತಮಗೆ ಅವಕಾಶ ಕೊಡುತ್ತೇನೆ. ಒಂದು ಕಡೆ ಕಾಲಿಂಗ್ ಅಟೆನ್‌ಷನ್ ಮೇಲೆ ಕೇಳುತ್ತೀರಿ, ಇನ್ನೊಂದು ಕಡೆ ಪ್ರಶ್ನೆ ಕೇಳುತ್ತೀರಿ, ಎಲ್ಲವೂ ಒಂದೇ ವಿಷಯಕ್ಕೆ ಸಂಬಂಧಪಟ್ಟಿದ್ದು. ಅದಕ್ಕೋಸ್ಕರ ಬೆಲೆ ಕುಸಿತದ ಚರ್ಚೆ ಬಂದಾಗ ತಾವು ಮಾತನಾಡಿ. ಹಸಿರು ಕಾರ್ಡ್ ವಿಷಯದ ಬಗ್ಗೆ ಈಗ ಮಾತನಾಡಿ.

(೫) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆ ಹೊಂದಿರುವ ಹಳ್ಳಿಯವರಿಗೆ ಹಸಿರು ಕಾರ್ಡು ನೀಡುವುದು.

ಶ್ರೀ ಎಸ್.ಕೆ. ಬೆಳ್ಳುಬ್ಬಿ (ಬಸವನ ಬಾಗೇವಾಡಿ) :— ಸನ್ಮಾನ್ಯ ಅಧ್ಯಕ್ಷರೇ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ, ಕೃಷ್ಣಾ ಮತ್ತು ಘಟಪ್ರಭಾ ನದಿಯ ಅಕ್ಕಪಕ್ಕದ ಬಹಳಷ್ಟು ಹಳ್ಳಿಗಳು ಮುಳುಗಡೆಯಾಗಿ ತಮ್ಮ ಹೊಲ ಮನೆಗಳನ್ನು ಕಳೆದುಕೊಂಡಿದ್ದಾರೆ. ಆ ಸಂತ್ರಸ್ಥರಿಗೆ ಸರ್ಕಾರದಿಂದ, ಬಡವ ಅಥವಾ ಶ್ರೀಮಂತ ಎಂದು ಭೇಧ ಮಾಡದೇ, ಎಲ್ಲಾ ಸಂತ್ರಸ್ಥರಿಗೆ ಹಳದಿ ಕಾರ್ಡನ್ನು ಕೊಟ್ಟು, ಕಡಿಮೆ ದರದಲ್ಲಿ ಅವರಿಗೆ ಆಹಾರ ಪದಾರ್ಥಗಳು ಸಿಗುವಂಥ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಆಹಾರ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ.